ಹಾವೇರಿ ವಿಶ್ವವಿದ್ಯಾಲಯ, ಹಾವೇರಿ
ಕೆರಿಮತ್ತಿಹಳ್ಳಿ, ಹಾವೇರಿ–58110
HAVERI UNIVERSITY, HAVERI
KERIMATTIHALLI-HAVERI-581110.

Email Id:
registrarhuh@gmail.com

No:HUH/RO/2024-25/1414

Date: 18/09/2024

## ಪರಿಷ್ಕೃತ ಸುತ್ತೋಲೆ

**ವಿಷಯ :** ಸನ್ 2024–25ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ವಿಷಯಗಳಿಗೆ UUCMS ಬದಲಾಗಿ offline ಮುಖಾಂತರ ಪ್ರವೇಶ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವ ಕುರಿತು.

**ಉಲ್ಲೇಖ:** 1)ಪ್ರವೇಶ ಅಧಿಸೂಚನೆ ಸಂಖ್ಯೆ: HUH/Aca/P.G/2024-25/358 Dt:26.08.2024
2) HUH/RO/2024-25/393 Date:09.09.2024
3) ಮಾನ್ಯ ಕುಲಪತಿಗಳ ಆದೇಶ ದಿನಾಂಕ: 18.09.2024.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಸನ್ 2024–25ನೇ ಶೈಕ್ಷಣಿಕ ಸಾಲಿನ ಎಲ್ಲ ಸ್ನಾತಕೋತ್ತರ ಕೋರ್ಸುಗಳಿಗೆ ಅರ್ಜಿ ಸಲ್ಲಿಸುತ್ತಿರುವ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕೋತ್ತರ ಪ್ರವೇಶ ಅಧಿಸೂಚನೆಯಲ್ಲಿ ಪ್ರವೇಶ ಅರ್ಜಿಯನ್ನು UUCMS Portal https://uucms.karnataka.gov.in ಮುಖಾಂತರ ದಿನಾಂಕ:18.09.2024ರ ಒಳಗಾಗಿ ಅರ್ಜಿ ಸಲ್ಲಿಸಲು ತಿಳಿಸಲಾಗಿತ್ತು. UUCMS ತಂತ್ರಾಂಶದಲ್ಲಿ ಕೆಲವು ತಾಂತ್ರಿಕ ಕಾರಣಗಳಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದ ಕಾರಣ, ಸ್ನಾತಕೋತ್ತರ ಕೋರ್ಸುಗಳಿಗೆ ಪ್ರಥಮ ವರ್ಷಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ಪ್ರವೇಶ ಅರ್ಜಿಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಮತ್ತು ಅರ್ಜಿ ಸಂಸ್ಕರಣಾ ಶುಲ್ಕವನ್ನು ಹಾವೇರಿ ವಿಶ್ವವಿದ್ಯಾಲಯದ ಜಾಲತಾಣ http://haveriuniversity.ac.in (ವೆಬ್‌ಸೈಟ್)ದಲ್ಲಿ ಪೇಮೆಂಟ್ Option ಮೂಲಕ P.G Application ನಲ್ಲಿ ಭರಿಸಿ, ಸದರ ಪ್ರತಿಯನ್ನು ಹಾವೇರಿ ವಿಶ್ವವಿದ್ಯಾಲಯದ ಪ್ರವೇಶ ಸಮಿತಿ ಅಧ್ಯಕ್ಷರು/ಸಂಯೋಜಕರಿಗೆ ದಿನಾಂಕ:21.09.2024ರ ಒಳಗಾಗಿ ಕಚೇರಿ ಅವಧಿಯಲ್ಲಿ ಸಲ್ಲಿಸಲು ತಿಳಿಸಲಾಗಿತ್ತು.

ಮುಂದುವರೆದು ಸ್ನಾತಕ ಅಂತಿಮ ವರ್ಷದ ಪರಿಣಾಮಗಳು ಪ್ರಕಟಗೊಳ್ಳುವುದು ವಿಳಂಬವಾಗುತ್ತಿರುವ ಕಾರಣ ಹಾಗೂ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡುವುದಕ್ಕಾಗಿ ಸ್ನಾತಕೋತ್ತರ ಪ್ರವೇಶ ದಿನಾಂಕವನ್ನು **30.09.2024**ರವರೆಗೆ ವಿಸ್ತರಿಸಲಾಗಿದೆ.

ಮುಂದುವರೆದು, ಪ್ರವೇಶ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ, ಉಲ್ಲೇಖ–1 ಮತ್ತು 2ರ ಅಧಿಸೂಚನೆ/ಸುತ್ತೋಲೆಯನ್ನು ಅನುಸರಿಸುವುದು ಹಾಗೂ ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ 9739777307 ಹಾಗೂ 8310363548 ನಂಬರ್‌ಗೆ ಸಂಪರ್ಕಿಸಬಹುದಾಗಿದೆ.

ಕುಲಸಚಿವರು
ಕುಲಸಚಿವರು
ಹಾವೇರಿ ವಿಶ್ವವಿದ್ಯಾಲಯ
ಕೆರಿಮತ್ತಿಹಳ್ಳಿ, ಹಾವೇರಿ–581110

**ಪ್ರತಿ:**
1. ಎಲ್ಲ ನಿಖಾಯಗಳ ಡೀನರುಗಳು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
2. ಎಲ್ಲ ಸ್ನಾತಕೋತ್ತರ ವಿಭಾಗಗಳ ಸಂಯೋಜಕರುಗಳು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
3. ಸ್ನಾತಕೋತ್ತರ ಕೋರ್ಸುಗಳನ್ನು ಜರುಗಿಸುತ್ತಿರುವ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ
4. ಕುಲಸಚಿವರು (ಮೌಲ್ಯಮಾಪನ) ಪರೀಕ್ಷಾ ವಿಭಾಗ, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
5. ವಿತ್ತಾಧಿಕಾರಿಗಳು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
6. ನೋಡಲ್ ಅಧಿಕಾರಿಗಳು, ಯು.ಯು.ಸಿ.ಎಮ್.ಎಸ್ ಘಟಕ, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
7. ಅಧ್ಯಕ್ಷರು/ಸಂಯೋಜಕರು, ಸ್ನಾತಕೋತ್ತರ ಪ್ರವೇಶ ಸಮಿತಿ, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
8. ಕಛೇರಿ ಪ್ರತಿ

Scanned with OKEN Scanner